ನೆಲಮಂಗಲ ತಾಲ್ಲೂಕಿನಲ್ಲಿ ಜಮೀನು ಸರ್ವೆ

531 (153) ಶ್ರೀ ಅಂಜನಮೂರ್ತಿ:- (ನೆಲಮಂಗಲ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲ ತಾಲ್ಲೂಕಿನಲ್ಲಿ ಭೂಮಾಪನ (ಲ್ಯಾಂಡ್ ಸರ್ವೆ) ವ್ಯಾಪಕವಾಗಿ ನಡೆದು ಎಷ್ಟು ವರ್ಷಗಳಾಯಿತು?

ಆ) ಸರ್ವೆ ದಾಖಲೆಗಳಲ್ಲಿ ಏಕರೂಪತೆ ಹಾಗೂ ಆಧುನಿಕತೆ ತರಲು ಕಂದಾಯ ಇಲಾಖೆ ಕೈಗೊಂಡ ಕಾರ್ಯಕ್ರಮಗಳೇನು?

ಇ) ಪ್ರತಿ ಗ್ರಾಮಕ್ಕೂ ಭೂಪಟ ಹೊಂದಲು ಸರ್ವೆ ಇಲಾಖೆ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ:- (ಕಂದಾಯ ಸಚಿವರು)

ಅ) 83 ವರ್ಷಗಳಾಗಿವೆ

ಆ) ಅ) ಭೂಪಟಗಳ ಮುದ್ರಣ

ಆ) ಆಧುನಿಕ ಉಪಕರಣಗಳ ಬಳಕೆ,

ಇ) ಸಿಬ್ಬಂದಿಗೆ ತರಬೇತಿ ನೀಡುವುದು,

ಈ) ಭೂಸಾಖಲೆಗಳ ಗಣಕೀಕರಣ,

ಉ) ಮೈಕ್ರೋ ಫಿಲಂ ಘಟಕ ಸ್ಥಾಪನೆ.

ಇ) ಹೌದು.

ಶಿರಾ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಗೆ ಕಂದಾಯ ಜಮೀನನ್ನು ವಿಲೇ

533 (568) ಶ್ರೀ ಟಿ.ಬಿ. ಜಯಚಂದ್ರ:- (ಕಳ್ಳಂಬೆಳ್ಳ) ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿರಾ ತಾಲ್ಲೂಕು ಶೀಬಿ ಸರ್ವೆ ನಂ 180-194 ರವರೆಗೆ ವ್ಯವಸಾಯಕ್ಕೆ ಯೋಗ್ಯವಾದ 14 ಸರ್ವೆ ನಂಬರ್‌ಗಳನ್ನು ಅರಣ್ಯ ಇಲಾಖೆಗೆ ವಿಲೇ ಮಾಡಿದ್ದು ಸರಿಯೇ?

ಆ) ಸದರಿ ಸರ್ವೆ ನಂಬರುಗಳಲ್ಲಿ 1970 ರಿಂದ ಬಗರ್ ಹುಕಂ ಸಾಗುವಳಿ ಮಾಡುತ್ತಿದ್ದು ಕೃಷಿ ಕಾರ್ಮಿಕರನ್ನು 1989-1990 ರಲ್ಲಿ ಬಲಾತ್ಕಾರವಾಗಿ ಧಕ್ಕೆ ಹಚ್ಚಿಸಿ ನೆಡುತೋಪು ಬೆಳೆಸಲು ಕಾರಣವೇನು? ಇದರಿಂದ ಸಾಧಿಸಿದ ಪ್ರಗತಿಯೇನು?

ಇ) 1970 ರಿಂದ ಬಗರ್ ಹುಕಂ ಸಾಗುವಳಿ ಮಾಡುತ್ತಿದ್ದವರು ಈ ಬಗ್ಗೆ ಮನವಿ ಮಾಡಿಕೊಂಡಿದ್ದು ಸದರಿ ಸರ್ವೆ ನಂಬರುಗಳನ್ನು ಅವರಿಗೆ ಬಿಟ್ಟು ಕೊಡಲು ಕ್ರಮ ಕೈಗೊಳ್ಳಲಾಗುವುದೇ?

ಈ) 1978ರ ಪೂರ್ವದಿಂದ ಬಗರ್ ಹುಕಂ ಸಾಗುವಳಿ ಮಾಡುತ್ತಿರುವ ಜಮೀನನ್ನು ಅರಣ್ಯ ವ್ಯಾಪ್ತಿಯೊಳಗೆ ಸೇರಿಸಿಕೊಂಡು ಬೌಂಡರಿಟ್ರೆಂಚ್ ಹೊಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ:- (ಕಂದಾಯ ಸಚಿವರು)

ಅ) ಸದ್ರಿ ಜಮೀನುಗಳ ಪೈಕಿ ಬಹುಪಾಲು ಗುಡ್ಡ ಗಾಡು ಪ್ರದೇಶವಾಗಿದ್ದು ವ್ಯವಸಾಯಕ್ಕೆ ಯೋಗ್ಯವಿಲ್ಲದಿದ್ದುದರಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ.

ಅ) ಅನಧಿಕೃತ ಸಾಗುವಳಿದಾರರು ಎಲ್ಲಾ ದೊಡ್ಡ ಹಿಡುವಳಿದಾರರಾಗಿದ್ದುದರಿಂದ ಅವರುಗಳನ್ನು ಹೊರದೂಡ ಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ವಿಜ್ಞಾನ ಮತ್ತು ಪರಿಸರ ಇಲಾಖೆಗಳಲ್ಲಿ ನೇಮಕಾತಿ

534 (569) ಶ್ರೀ ಹೆಚ್. ಎಂ. ರೇವಣ್ಣ:- (ಮಾಗಡಿ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಗಳಲ್ಲಿ ದರ್ಜೆ ಮತ್ತು ನೇಮಕಾತಿ ನಿಯಮಗಳನ್ನು ಜಾರಿಗೆ ತರಲಾಗಿದೆಯೇ?

ಆ) ಈ ಇಲಾಖೆಗಳಲ್ಲಿ ರೋಸ್ಟರ್ ಪದ್ಧತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿರುವುದೇ?

ಇ) ಈ ಇಲಾಖೆಗಳಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಯಾವ ಯಾವ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ?

ಈ) ಕಳೆದ ಮೂರು ವರ್ಷಗಳಿಂದ ಎಷ್ಟು ಹಣವನ್ನು ಈ ಯೋಜನೆಯಡಿಯಲ್ಲಿ ವ್ಯಯ ಮಾಡಲಾಗಿದೆ (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಬಸವಲಿಂಗಪ್ಪ:- (ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು)

ಅ) ಇದುವರೆಗೂ ಅಂತಹ ವ್ಯವಸ್ಥೆ ಇರಲಿಲ್ಲ. ಈಗ ದರ್ಜೆ ಮತ್ತು ನೇಮಕಾತಿ ನಿಯಮಗಳನ್ನು ಕರಡು ರೂಪದಲ್ಲಿ ರಚಿಸಲಾಗಿದೆ. ಇದನ್ನು ಶೀಘ್ರದಲ್ಲಿಯೇ ಅಂತಿಮಗೊಳಿಸಲಾಗುತ್ತಿದೆ.

ಆ) -ಇಲ್ಲ-

ಇ) ಈಗ ರಚಿಸಲಾಗುತ್ತಿದೆ.

ಈ) ಕಾಲಂ 3 ರಂತೆ ಯಾವ ಖರ್ಚನ್ನೂ ಮಾಡಿರುವುದಿಲ್ಲ.

ಇಂಡಿ ತಾಲ್ಲೂಕಿನಲ್ಲಿ ಪಶು ವೈದ್ಯ ಆಸ್ಪತ್ರೆಗಳ ಮಂಜೂರಾತಿ

537 (579) ಶ್ರೀ ಮನೋಹರ ಐನಾಪುರ:- (ಬಿಳ್ಳೊಳ್ಳಿ) ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಂಡಿ ತಾಲ್ಲೂಕಿನ ಬಿಳ್ಳೊಳ್ಳಿ ಕ್ಷೇತ್ರಕ್ಕೆ ಬಿಜಾಪುರ ಜಿಲ್ಲಾಪರಿಷತ್ತಿನಿಂದ ಐದು ಪಶು ವೈದ್ಯ ಆಸ್ಪತ್ರೆಗಳು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ಅನುಮೋದಿಸಲಾಗುವುದು?

ಶ್ರೀ ಬಸವರಾಜ್ ಪಾಟೀಲ್:- (ಪಶು ವೈದ್ಯ, ಪಶು ಸಂಗೋಪನಾ ಸಚಿವರು)

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.